ಓ ಎಸ್ ನಂಃ 14/2020
ಡಿ ಡಬ್ಲ್ಯೂ ಃ 1

ದಿಃ 19.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ. ಎ ಎಸ್ ಎಸ್ ವಕೀಲರಿಂದಃ-

12 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ 1 ರಿಂದ ನಿಡಿ 12 ಎಂದು, 6 ಮ್ಯುಟೇಷನ್ ಎಕ್ಸ್ಟ್ರಾಕ್ಟ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ 13 ರಿಂದ ನಿಡಿ 18 ಎಂದು, ದಿಃ 20.05.2000 ರ ಒಂದು ನೋಂದಾಯಿತವಲ್ಲದ ವಿಭಾಗ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲಾತಿಯನ್ನು ಪರಿಶೀಲಿಸಿದಾಗ ಸದರಿ ದಾಖಲಾತಿಗೆ ಕೊರತೆಯ ಮುದ್ರಾಂಕ ಶುಲ್ಕ ಮತ್ತು ದಂಡವನ್ನು ಪಾವತಿ ಮಾಡಿದ್ದು ಕಂಡುಬಂದಿರುತ್ತದೆ. ನೋಂದಣಿ ಕಾಯ್ದೆ ಪ್ರಕಾರ ವಿಭಾಗ ಪತ್ರವು ಖಡ್ಡಾಯವಾಗಿ ನೋಂದಣಿಯಾಗಬೇಕಾದಂತಹ ದಾಖಲಾತಿ ಆಗಿರುತ್ತದೆ ಆದ್ದರಿಂದ ಸದರಿ ದಾಖಲಾತಿಯನ್ನು ನೋಂದಣಿ ಕಾಯ್ದೆ 49 ಪ್ರಕಾರ ಸದರಿ ದಾಖಲಾತಿಯನ್ನು Colletral purpose ಉದ್ದೇಶಕ್ಕೆ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು ಎಂಬ ಷರತ್ತಿಗೆ ಒಳಪಟ್ಟು ಸದರಿ ದಾಖಲಾತಿಯನ್ನು ಸಾಕ್ಷಿಯ ಒಪ್ಪಿಗೆಯ ಮೇರೆಗೆ ನಿ ಡಿ 19 ಎಂದು, ಸಾಕ್ಷಿಯು ನಿಡಿ 19 ರಲ್ಲಿರುವ ಉಳಿದ ಪ್ರತಿವಾದಿಗಳ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ 19(ಎ) ಯಿಂದ 19(ಸಿ) ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಮುಂದುವರೆಸಲು ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.